**ಇಂದು ದಿನಾಂಕಃ 20-03-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ವಾದಿ ಪರವಾಗಿ ಶ್ರೀ ಜೆ.ಪಿ.ಎ ವಕೀಲರಿಂದಃ-**

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ದಾವಾ ಆಸ್ತಿಯಲ್ಲಿ ಮನೆ ಕಟ್ಟಲು ಇಲ್ಲಿಯವರೆಗೆ ನಾನು ಪರವಾನಿಗೆ ಪಡೆದಿಲ್ಲ. ಯಾವ ಕಾರಣಕ್ಕಾಗಿ ಪರವಾನಿಗೆ ಪಡೆದಿಲ್ಲ ಎಂದು ಪ್ರಶ್ನಿಸಿದಾಗ ಸಾಕ್ಷಿ ಯಾವುದೇ ಸಮಸ್ಯೆ ಇಲ್ಲದಿರುವ ಕಾರಣ ಪರವಾನಿಗೆ ಪಡೆದಿಲ್ಲ ಎಂದು ನುಡಿಯುತ್ತಾರೆ.

2021 ರಲ್ಲಿ ನಾನು ಮನೆ ಕಟ್ಟಲು ಪ್ರಾರಂಭಿಸಿದೆ. ಜೂನ 2021 ರಲ್ಲಿ ದಾವಾ ಆಸ್ತಿಯಲ್ಲಿ ಕಟ್ಟಡ ನಿರ್ಮಾಣ ಮಾಡಲು ಪ್ರಾರಂಭಿಸಿದ್ದೇನೆ. ದಿನಾಂಕ 30-11-2021 ರಂದು ನಾನು ಅನಾಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡುತ್ತಿದ್ದೇನೆ ಎಂದು ವಾದಿ ಪಂಚಾಯಿತಿಗೆ ಅರ್ಜಿ ಸಲ್ಲಿಸಿರುತ್ತಾನೆ ಎಂದರೆ ಸರಿ. ಅದೇ ದಿನ ಪಂಚಾಯಿತಿ ಅಧಿಕಾರಿಗಳು ನನಗೆ ನೋಟಿಸನ್ನು ನೀಡಿರುತ್ತಾರೆ ಎಂದರೆ ಸರಿ. ಪಂಚಾಯಿತಿಗೆ ನಾನು ನೋಟಿಸ ಬಂದ ನಂತರ ಕಟ್ಟಡ ಬಗ್ಗೆ ಉತ್ತರ ನೀಡಿಲ್ಲ. ನೋಟಿಸಿನ ಪ್ರಕಾರ ನೋಟಿಸ ನೀಡಿದ ಮೂರು ದಿನಗಳ ಒಳಗೆ ದಾಖಲಾತಿಗಳನ್ನು ಹಾಜರು ಮಾಡಬೇಕು ಮತ್ತು ಪರವಾನಿಗೆ ಪಡೆಯಬೇಕು ಎಂದು ಇರುತ್ತದೆ ಎಂದರೆ ಸಾಕ್ಷಿ ಪರವಾನಿಗೆ ಪಡೆದು ಕಟ್ಟಡ ನಿರ್ಮಾಣ ಮಾಡಿದ್ದೇವೆ ಎಂದು ನುಡಿಯುತ್ತಾರೆ. ಕಟ್ಟಡ ನಿರ್ಮಾಣದ ಬಗ್ಗೆ ನಾನು ಪಂಚಾಯಿತಿಗೆ ನಕಾಶೆಯನ್ನು ಸಲ್ಲಿಸಿಲ್ಲ. ನೋಟಿಸ ನೀಡಿದ ನಂತರ ನಾನು ಪಂಚಾಯಿತಿಗೆ ಯಾವುದೇ ಅರ್ಜಿ ಸಲ್ಲಿಸಿಲ್ಲ. ನಾನು ಪಂಚಾಯಿತಿ ಕಾರ್ಯದರ್ಶಿಗೆ ಬೇಟಿಯಾಗಿರುತ್ತೇನೆ. ಪಂಚಾಯಿತಿಯವರು ಹೇಳಿದಂತೆ ನಾನು ನಿರ್ಮಾಣ ಮಾಡಿದ್ದೇನೆ. ನೋಟಿಸ ನೀಡಿದ 10-12 ದಿನಗಳು ಆದ ಮೇಲೆ ನಾನು ಪಂಚಾಯಿತಿ ಅಧಿಕಾರಿಗಳಿಗೆ ಬೇಟಿಯಾಗಿರುತ್ತೇನೆ ಮತ್ತು 23 ದಿನಾಂಕದಂದು ಪಂಚಾಯಿತಿ ಅಧಿಕಾರಿಗಳು ಬಂದಿರುತ್ತಾರೆ. ನಾನು ಪಂಚಾಯಿತಿ ಅಧಿಕಾರಿಗಳಿಗೆ ಬೇಟಿಯಾದಾಗ ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ. ಪಂಚಾಯಿತಿಯವರು ಸ್ಥಳಕ್ಕೆ ಬರುವ ಬಗ್ಗೆ 17-11-2021 ರಂದು ಮೌಖಿಕವಾಗಿ ತಿಳಿಸಿದ್ದಾರೆ. ದಿನಾಂಕ 23-11-2021 ರಂದು ಪಂಚಾಯಿತಿ ಅಧಿಕಾರಿಗಳು ಸ್ಥಳಕ್ಕೆ ಬೇಟಿ ನೀಡಿದ್ದರು. ಸ್ಥಳಕ್ಕೆ ಪಂಚಾಯಿತಿ ಅಭಿವೃದ್ದಿ ಅಧಿಕಾರಿ, ಪಂಚಾಯಿತಿ ಕಾರ್ಯದರ್ಶಿ ಹಾಗೂ ಗಣ್ಯ ವ್ಯಕ್ತಿಗಳು ಬಂದಿದ್ದರು. ಸ್ಥಳದಲ್ಲಿ ಆಗ ನಾನು ಮತ್ತು ನನ್ನ ಸಹೋದರರು ಇದ್ದ ವಾದಿಯ ತಾಯಿ ಹಾಗೂ ವಾದಿಯ ಹೆಂಡತಿ ಸಹ ಇದ್ದರು.

ಆ ದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಪಂಚಾಯಿತಿ ಕಾರ್ಯದರ್ಶಿ, ಮಹದೇವ, ಮಾಲು ಅಶೋಕ, ಪ್ರಭು, ವಿಜಯಕುಮಾರ, ಅವಿನಾಶ ಹಾಗೂ ಇನ್ನಿತರರು ಸಹಿ ಮಾಡಿದ್ದರು. ಪಂಚಾಯಿತಿಯವರು ಸ್ಥಳಕ್ಕೆ ಬರುವ ಬಗ್ಗೆ ನನಗಾಗಲಿ ವಾದಿಯರಿಗಾಗಲಿ ನೋಟಿಸ ನೀಡಿಲ್ಲ. ಪಂಚಾಯಿತಿ ಅಧಿಕಾರಿಗಳು ಸ್ದಳಕ್ಕೆ ಬಂದಾಗ ವಾದಿ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪಂಚಾಯಿತಿಯವರು ದಾಖಲೆ ಬರೆದಾಗ ವಾದಿ ಹಾಗೂ ವಾದಿಯ ತಾಯಿ ಪಂಚನಾಮೆಯಲ್ಲಿ ಸಹಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಪಂಚಾಯಿತಿ ಅಧಿಕಾರಿಗಳು ಸ್ಥಳಕ್ಕೆ ಬಂದ ಮರುದಿನ ಪಂಚನಾಮೆ ಬರೆದಿದ್ದಾರೆ. ದಿನಾಂಕ 30-12-2021 ರಂದು ಪಂಚನಾಮೆ ಬರೆದಿರುತ್ತಾರೆ. ಪಂಚಾಯಿತಿ ಅಧಿಕಾರಿಗಳು ಒಂದೇ ಪಂಚನಾಮೆಯನ್ನು ಬರೆದಿರುತ್ತಾರೆ.

ನನ್ನ ಮುಖ್ಯ ವಿಚಾರಣೆಯ ಶಪತ ಪತ್ರದಲ್ಲಿರುವ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಶಪತ ಪತ್ರದಲ್ಲಿ ಸುಳ್ಳು ಮಾಹಿತಿ ಇದೆ ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ 6/2006 ರಲ್ಲಿ ವಾದಿ ತಂದೆ, 2 ನೇ ಪ್ರತಿವಾದಿ ಹಾಗೂ ನನ್ನ ತಾಯಿರವರ ಮಧ್ಯ ರಾಜೀ ಆಗಿರುತ್ತದೆ ಎಂದರೆ ಸಾಕ್ಷಿ ನಾನು ಚಿಕ್ಕವನಿದ್ದ ಕಾರಣ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಂತೋಷ ತಂದೆ ನಿರಂಜಪ್ಪ ಎಂದರೆ ನಾನೇ ಎಂದರೆ ಸರಿ. ಸದರಿ ಅಸಲು ದಾವೆಯಲ್ಲಿ ನಮ್ಮ ಪರವಾಗಿ ಶಶಿಕಾಂತ ಆಡಕಿ ವಕೀಲರನ್ನು ನೇಮಕ ಮಾಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಆಸ್ತಿ ಪೂರ್ವ ದಿಕ್ಕಿಗೆ ವಾದಿಯರ ಮನೆ ಇದ್ದು ಪಶ್ಚಿಮ ದಿಕ್ಕಿಗೆ ನಮ್ಮ ಮನೆ ಇದೆ ಎಂದರೆ ಸರಿ. ನನ್ನ ತಂದೆ ಮತ್ತು ನನ್ನ ಅಣ್ಣ ಧನರಾಜರವರು ಹೆಬ್ಬರಳಿನ ಗುರುತನ್ನು ಹಾಕುತ್ತಾರೆ ಎಂದರೆ ಸಾಕ್ಷಿ ಧನರಾಜರವರು ಸಹಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ನಾನು ಹಾಗೂ 1 ನೇ ಪ್ರತಿವಾದಿ ಸಹಿ ಮಾಡುತ್ತೇವೆ ಎಂದರೆ ಸರಿ. ಈಗ ನೋಡುತ್ತಿರುವ ನಿಪಿ-2 ರಲ್ಲಿರುವ ಸಹಿ ನನ್ನದೆ. ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತರುವ ನಿಪಿ-3 ರಲ್ಲಿರುವ ಸಹಿ ನನ್ನದೆ. ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದಲ್ಲಿ ಓದಿ ತಿಳಿದುಕೊಂಡು ನಿಪಿ-2 ಮತ್ತು 3 ರಲ್ಲಿ ಸಹಿ ಮಾಡಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-2 ಮತ್ತು 3 ರಲ್ಲಿ ಬರೆದಿರುವುದು ತಪ್ಪು ಇರುತ್ತದೆ. ನಿಪಿ-2 ಮತ್ತು 3 ರಲ್ಲಿ ಬರೆದಿರುವುದು ತಪ್ಪು ಇರುತ್ತದೆ ಎಂದು ಮನೆ ನಿರ್ಮಾಣ ಮಾಡುವ ಸಮಯಕ್ಕೆ ಗೊತ್ತಾಗಿರುತ್ತದೆ. ನಿಪಿ-2 ಮತ್ತು 3 ತಪ್ಪು ಇದೆ ಎಂದು ರದ್ದುಗೊಳಿಸಲು ಯಾವುದೇ ಕ್ರಮ ಕೈಗೊಂಡಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣೆಯ ಶಪತ ಪತ್ರದಲ್ಲಿ ರಾಜೀಯಾಗಿರುವುದು ಸರಿ

ಇದೆ ಎಂದು ಉಲ್ಲೇಖವಿದೆ ಎಂದರೆ ನನಗೆ ಗೊತ್ತಿಲ್ಲ.

ನಿಪಿ-3 ರಲ್ಲಿ ತೋರಿಸಿದಂತೆ ಎಡಬದಿಯ ಭಾಗಕ್ಕೆ ಉತ್ತರದಿಂದ ದಕ್ಷಿಣಕ್ಕೆ ಬಂದು ನಂತರ ಪೂರ್ವದಿಂದ ಪಶ್ಚಿಮಕ್ಕೆ ಹೋಗಿ ಮತ್ತೇ ಉತ್ತರದಿಂದ ದಕ್ಷಿಣಕ್ಕೆ ಹೋಗಿರುತ್ತದೆ ಎಂದರೆ ಸರಿ. ನಿಪಿ-3 ರಲ್ಲಿ ತೋರಿಸಿದಂತೆ ಎಡಬದಿಯ ಭಾಗಕ್ಕೆ ಚರಂಡಿ ಇರುತ್ತದೆ ಎಂದು ತೋರಿಸಿರುತ್ತೇವೆ ಎಂದರೆ ಸರಿ. ನಿಪಿ-ರಲ್ಲಿ ತೋರಿಸಿರುವಂತೆ ಗುರುತಿಸಿರುವ ಭಾಗ ರಾಜೀಯಾದ ಭಾಗ ಎಂದರೆ ಸರಿ.

ದಾವಾ ಸ್ವತ್ತಿನ ಅನುಸೂಚಿಯಲ್ಲಿ ತೋರಿಸಿದಂತೆ ಚರಂಡಿ ಭಾಗವನ್ನು ಒಳಗೆ ತೆಗೆದುಕೊಂಡು 1.5 ಪೀಟ್ ಸ್ಥಳವನ್ನು ಒಳಗೆ ತೆಗೆದುಕೊಂಡು ನಿರ್ಮಾಣ ಮಾಡಿದ್ದೇವೆ ಎಂದರೆ ಸಾಕ್ಷಿ ಅದು ಸರಕಾರಿ ಸ್ವತ್ತು ಇರುತ್ತದೆ ಹಾಗೂ ಪ್ರತಿವಾದಿಗೆ ಸೇರಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಸ್ಥಳಕ್ಕೆ ಸರಕಾರಕ್ಕೆ ಸೇರಿದ್ದು ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ. ಸರಕಾರಿ ಸ್ವತ್ತು ಇರುತ್ತದೆ ಎಂದು ಸುಳ್ಳು ಇರುತ್ತದೆ ಹಾಗೂ ರಾಜೀಯಾದ ಪ್ರಕಾರ ಸದರಿ ಸ್ಥಳ ವಾದಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಅನೂಸುಚಿಯಲ್ಲಿ ಕೆಂಪು ಬಣ್ಣದಲ್ಲಿ ತೋರಿಸಿರುವ ಸ್ಥಳದ ಬಗ್ಗೆ ಪಂಚನಾಮೆಯಾಗಿರುತ್ತದೆ. ಈಗ ದಾವಾ ಸ್ವತ್ತಿನ ಅನೂಸುಚಿಯಲ್ಲಿ ತೋರಿಸಿದಂತೆ ನಕಾಶೆಯ ಪ್ರಕಾರ ಈಗ ನಾಲಾ ಇರುವುದಿಲ್ಲ. ಸಾಕ್ಷಿ ಮುಂದುವರೆದು ಮೊದಲು ಸಹ ಇರಲಿಲ್ಲ ಎಂದು ನುಡಿಯುತ್ತಾರೆ. ನಾಲಾ ಇರದಿದ್ದರೆ ನಿಪಿ-2 ಮತ್ತು 3 ರಲ್ಲಿ ಯಾವ ಕಾರಣಕ್ಕಾಗಿ ಸಹಿ ಮಾಡಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನಾನು ಚಿಕ್ಕವನಿದ್ದ ಕಾರಣ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-2 ಮತ್ತು 3 ರಲ್ಲಿ ಸಹಿ ಮಾಡುವ ಸಮಯಕ್ಕೆ ನನಗೆ 12-13 ವಯಸ್ಸು ಇತ್ತು.

ಈಗ ನೋಡುತ್ತಿರುವ ನಿಪಿ-1 ರ ದಾಖಲೆಯಲ್ಲಿ ನನ್ನ ವಯಸ್ಸು 25 ಎಂದು ಉಲ್ಲೇಖವಿದೆ. ಸಾಕ್ಷಿ ಮುಂದುವರೆದು ಸುಳ್ಳು ಉಲ್ಲೇಖ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಅಸಲು ದಾವೆ ಸಂಖ್ಯೆ 4/2006 ರಲ್ಲಿ ನಾನು ಚಿಕ್ಕವನಿದ್ದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ. ಆಗ ನಾನು ಚಿಕ್ಕವನಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಮತ್ತು 25 ವರ್ಷ ವಯಸ್ಸಿನವನಾಗಿದ್ದೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಅಸಲು ದಾವೆ ಸಂಖ್ಯೆ 4/2006 ರಲ್ಲಿ ಸಹಿ ಮಾಡುವ ಸಮಯಕ್ಕೆ ನಾನು ನಾಬಾಲಿಕನಿದ್ದೇನೆ ಎಂದು ಉಲ್ಲೇಖವಿಲ್ಲ.

ಪಿಡಿಒ ರವರು ನನ್ನ ವಿರುದ್ಧ ದೂರು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ 25-12-

2021 ರಂದು ನಿಪಿ-6 ರಲ್ಲಿ ನನ್ನ ವಿರುದ್ಧ ದೂರು ನೀಡಿದ್ದಾರೆ ಎಂದರೆ ಸರಿಯಲ್ಲ.

ಪಂಚನಾಮೆಯ ಪ್ರತಿ ಪಡೆದುಕೊಂಡು ಯಾವತ್ತು ಅರ್ಜಿ ಸಲ್ಲಿಸಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಪಂಚನಾಮೆ ಬರೆದು ಕೊಟ್ಟ ಅದರ ಪ್ರತಿಯನ್ನು ನನಗೆ ನೀಡಿದ್ದಾರೆ ಎಂದು ನುಡಿಯುತ್ತಾರೆ. ಅರ್ಜಿ ಸಲ್ಲಿಸದಿದ್ದರೆ ನಿಡಿ-3 ರ ದಾಖಲೆ ನಿಮ್ಮ ಹತ್ತಿರ ಹೇಗೆ ಬಂತು ಎಂದು ಪ್ರಶ್ನಿಸಿದಾಗ ಸಾಕ್ಷಿ ಪಿಡಿಒ ಮತ್ತು ಪಂಚಾಯಿತಿ ಕಾರ್ಯದರ್ಶಿಗಳು ಸಹಿ ಮಾಡಿ ನೀಡಿದ್ದಾರೆ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಡಿ-3 ರಲ್ಲಿ ನನ್ನ ಅಣ್ಣನ ಸಹಿ ಇದೆ. ನಿಡಿ-3 ರಲ್ಲಿ ನನ್ನ 3 ಜನ ಸಹೋದರರ ಸಹಿ ಇದೆ ಎಂದರೆ ಸಾಕ್ಷಿ ನನ್ನ ಅಣ್ಣನ ಸಹಿ ಮಾತ್ರ ಇದೆ ಎಂದು ನುಡಿಯುತ್ತಾರೆ.

ನಿಪಿ-5 ರಲ್ಲಿರುವ ಸಹಿ ವಾದಿಯ ಸಹಿ ಎಂದರೆ ಸಾಕ್ಷಿ ಅಲ್ಲ ಎಂದು ನುಡಿಯುತ್ತಾರೆ. ಈಗ ನೋಡುತ್ತಿರುವ ವಾದ ಪತ್ರದಲ್ಲಿರುವ ಸಹಿ ವಾದಿ ಸಹಿ ಎಂದರೆ ಸರಿಯಲ್ಲ. ನಿಪಿ-5 ರಲ್ಲಿರುವ ಸಹಿ ಮತ್ತು ವಾದ ಪತ್ರದಲ್ಲಿರು ಸಹಿಗೆ ವ್ಯತ್ಯಾಸ ಇರುವುದಿಲ್ಲ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ನಿಡಿ-3 ರಲ್ಲಿರುವ ಸಹಿ ವಾದಿಯದ್ದು. ಸಾಕ್ಷಿ ಮುಂದುವರೆದು ಸದರಿ ಸಹಿ ವಾದಿ ನನ್ನ ಮುಂದೆ ಮಾಡಿದ್ದಾನೆ ಎಂದು ನುಡಿಯುತ್ತಾರೆ. ಸಾಕ್ಷಿ ಗುರುತಿಸಿರುವ ವಾದಿಯ ಸಹಿಯನ್ನು ನಿಪಿ-8 ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ವಾದಿ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಮಾಡಿದ್ದಾನೆ. ಪಂಚನಾಮೆ ಮಾಡಿದ ದಿನದಂದು ವಾದಿ ಸಹಿ ಮಾಡಿದ್ದಾನೆ.

**ಮುಂದಿನ ಪಾಟೀ ಸವಾಲಿಗೆ ಮುಂದೂಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**